**<u>6 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,</u>**

**<u>ಬೆಂಗಳೂರು ನಗರ</u>**

**ಸಿ.ಸಿ. ನಂ.4104/2023**

| | |
|---|---|
| ಫಿರ್ಯಾದಿಯ ಹೆಸರು | - ಸತ್ಯವತಿ ದೇವಿ ವೇಲಿದಂಡ |

ವಿರುದ್ಧ

| | |
|---|---|
| ಆರೋಪಿಯ ಹೆಸರು | - ಟಿ.ಆರ್. ಗಣೇಶ್ |
| ವಯಸ್ಸು | - *44* ವರ್ಷ. |
| ತಂದೆಯ ಹೆಸರು | - ರಾಜಣ್ಣ |
| ಉದ್ಯೋಗ | - ಕ್ಯಾಂಟಿನ್ ಬಿಸಿನೆಸ್ |
| ವಿಳಾಸ | - ನಂ.*46, 2* ನೇ ಕ್ರಾಸ್, ರಾಬಿನ್ ಟಾಕೀಸ್ ಹತ್ತಿರ, ಕೆಂಗೇರಿ |

**<u>ಆಪಾದನೆ</u>**

ಆರೋಪಿಯಾದ ನೀವು ಫಿರ್ಯಾದಿಗೆ ಕೊಡಬೇಕಾಗಿದ್ದ ಹಣವನ್ನು ಮರು ಪಾವತಿಸಲು ಎಸ್ಬಿಪಿಬಿ ಗಿರಿನಗರ, ಬೆಂಗಳೂರು ಶಾಖೆಯ ವಿಜಯ ಬ್ಯಾಂಕ್‌ನ ಒಂದು ಚೆಕ್ ಅನ್ನು ಅಂದರೆ **ರೂ.*10,00,000/-*** *(*ರೂ. ಹತ್ತು ಲಕ್ಷ *)* ಹಣಕ್ಕೆ ಚೆಕ್ **ನಂ.*485829,* ದಿ:*10.02.2023*** ಎಂದು ನಮೂದಿಸಿದ ಈ ಚೆಕ್‌ನ್ನು ಫಿರ್ಯಾದಿಗೆ ಕೊಟ್ಟಿದ್ದು, ಫಿರ್ಯಾದಿಯು ಸದರಿ ನಿಮ್ಮ ಚೆಕ್ ಅನ್ನು ತಮ್ಮ ಖಾತೆ ಬ್ಯಾಂಕಿಗೆ ಹಾಜರುಪಡಿಸಿದ್ದು ***Erstwhile Vijaya bank cheque stopped in clearing*** ಎಂಬ ಕಾರಣದಿಂದ **ದಿ:*14.02.2023*** ರಂದು ಚೆಕ್ ಅಮಾನ್ಯಗೊಂಡಿದ್ದು, ಚೆಕ್ ವಾಪಸ್ಸಾದ ನಂತರ ಫಿರ್ಯಾದಿಯು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ **ದಿ:*15.03.2023*** ರಂದು ನಿಮಗೆ ಕಾನೂನು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೊಟೀಸು ನಿಮಗೆ ಜಾರಿ ಆಗಿದ್ದರೂ ಸಹ ನೀವು ಚೆಕ್ ಹಣ ಮರು ಪಾವತಿ ಮಾಡದೇ ವರ್ಗಾವಣೆಯ ಲಿಖಿತಗಳ ಅಧಿನಿಮಯ ಕಾಯ್ದೆ ಕಲಂ *138* ರ ಅಡಿಯಲ್ಲಿ ಶಿಕ್ಷಾರ್ಹ

This is a True Copy of the Court Records Online. Authenticated @ districts.ecourtsindia.com/cnr/KABC020138222023/truecopy/order-1.pdf

www.ecourtsindia.com

ಅಪರಾಧವನ್ನು ನನ್ನ ಸಂಜ್ಞೆಯ ಅಡಿಯಲ್ಲಿ ಎಸಗಿರುತ್ತೀರಿ ಎಂದು ನಿಮ್ಮನ್ನು ಈ ಮೂಲಕ ಅಪಾದಿಸಿರುತ್ತೇನೆ.

ಪ್ರಶ್ನೆಃ*1* ಈಗ ಓದಿ ಹೇಳಿದ ಆಪಾದನೆ ನಿಮಗೆ ಅರ್ಥವಾಗಿದೆಯೇ*?*
ಉತ್ತರಃ

ಪ್ರಶ್ನೆಃ*2* ಈ ಆಪಾದನೆಯನ್ನು ನೀವು ಮುಕ್ತವಾಗಿ ಒಪ್ಪಿಕೊಳ್ಳುತ್ತೀರೋ, ಇಲ್ಲವೂ ಅಥವಾ ಪ್ರಕರಣ ನಡೆಸುತ್ತೀರೋ*?*
ಉತ್ತರಃ

ಮೇಲ್ಕಂಡ ಆಪಾದನೆಯನ್ನು ಈ ದಿನ ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ, ಹೇಳಿ, ತಿಳಿಸಿಕೊಡಲಾಯಿತು. ಸದರಿ ಆಪಾದನೆಯ ಪ್ರಶ್ನೆಗಳ ಉತ್ತರ ಸರಿ ಇದೆ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ದಿನಾಂಕಃ*18.01.2024*

**(ಹೆಚ್.ಪಿ.ಮೋಹನ್ ಕುಮಾರ್)**
***6* ನೇ ಎಎಸ್‌ಸಿಜೆ ಮತ್ತು ಎ.ಸಿ.ಎಮ್.ಎಮ್**
**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020138222023/truecopy/order-1.pdf